**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು ನ್ಯಾಯಾಲಯದಲ್ಲಿ ಸಿಂದಗಿ.**

**ಉಪಸ್ಥರು: ಶ್ರೀ ನಾಗೇಶ ಕೆ. ಮೊಗೇರ.,**
**ಬಿ.ಕಾಂ, ಎಲ್ .ಎಲ್.ಎಮ್**
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು.**

**ಅಸಲು ದಾವಾ ನಂ. ಃ 57/2023**

**ದಿನಾಂಕ 6 ನೇ ನವೆಂಬರ 2023**

**ವಾದಿಃ**

ಸಿದ್ದಣ್ಣ ತಂ. ಭೀಮಶ್ಯಾ ಬಿರಾದಾರ,
ವಯಸುಃ 34 ವರ್ಷ, ಉಃ ಒಕ್ಕಲುತನ,
ಸಾಃ ಹಿಕ್ಕನಗುತ್ತಿ ತಾಃ ಸಿಂದಗಿ , ಜಿಃ ವಿಜಯಪೂರ.

**ಃ ವಿರುದ್ದ ಃ**

**ಪ್ರತಿವಾದಿಃ**

ಸಿದ್ದಣ್ಣ ತಂ. ಮಲ್ಲಪ್ಪ ಸಣ್ಣಮನಿ,
ವಯಸುಃ 35 ವರ್ಷ, ಉಃ ಒಕ್ಕಲುತನ,
ಸಾಃ ಹಿಕ್ಕನಗುತ್ತಿ ತಾಃ ಸಿಂದಗಿ , ಜಿಃ ವಿಜಯಪೂರ.

I.A.No.I

**ಅರ್ಜಿದಾರರು/ವಾದಿ**

ಸಿದ್ದಣ್ಣ ತಂ. ಭೀಮಶ್ಯಾ ಬಿರಾದಾರ,
ವಯಸುಃ 34 ವರ್ಷ, ಉಃ ಒಕ್ಕಲುತನ,
ಸಾಃ ಹಿಕ್ಕನಗುತ್ತಿ ತಾಃ ಸಿಂದಗಿ , ಜಿಃ ವಿಜಯಪೂರ.

(By. Sri. V.L.M Adv )

**ಃ ವಿರುದ್ದ ಃ**

**ಎದರುದಾರರು / ಪ್ರತಿವಾದಿ**

ಸಿದ್ದಣ್ಣ ತಂ. ಮಲ್ಲಪ್ಪ ಸಣ್ಣಮನಿ,
ವಯಸುಃ 35 ವರ್ಷ, ಉಃ ಒಕ್ಕಲುತನ,
ಸಾಃ ಹಿಕ್ಕನಗುತ್ತಿ ತಾಃ ಸಿಂದಗಿ , ಜಿಃ ವಿಜಯಪೂರ.

(By Sri.S.J.W Adv.)

**ವಾದಿಯು ಆದೇಶ ಕಲಂ 39 ನಿಯಮ 1 ಮತ್ತು 2 ಸಿ.ಪಿ.ಸಿ. ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ 1 ರ ಮೇಲೆ ಆದೇಶ**

ವಾದಿ/ ಅರ್ಜಿದಾರರು ಈ ಅರ್ಜಿಯನ್ನು ಸಲ್ಲಿಸಿ, ಹಿಕ್ಕನಗುತ್ತಿ ಗ್ರಾಮದ ದಾವಾ ಆಸ್ತಿ ರಿ.ಸ.ನಂ.9/1 ಎ ಪೋಡಿಯ ನಂತರ ಜಮೀನು ರಿ.ಸ ನಂ. 9/*/* ಪೈಕಿ 01 ಎಕರೆ 30 ಗುಂಟೆ ಜಮೀನು ಮತ್ತು ರಿ.ಸ.ನಂ.10/1 ಎ ಪೋಡಿಯ ನಂತರ ಜಮೀನು ರಿ.ಸ ನಂ. 10/*/* ಪೈಕಿ 01 ಎಕರೆ 32 ಗುಂಟೆ ಜಮೀನನ್ನು ಪರಭಾರೆ ಮಾಡದಂತೆ ಪ್ರತಿವಾದಿಯ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡುವಂತೆ ಪ್ರಾರ್ಥಿಸಿರುತ್ತಾರೆ.

2. ಅರ್ಜಿದಾರರು ತನ್ನ ಅರ್ಜಿಯ ಜೊತೆ ಇಟ್ಟಿರುವ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯು ಪ್ರಪಂಚದ ಹಣದ ಅಡಚಣೆ ಇರುವುದರಿಂದ ದಾವಾ ಆಸ್ತಿಯನ್ನು ಪ್ರತಿವಾದಿಯು ರೂ.6,00,000/-ಗಳಿಗೆ ಮಾರಾಟ ಮಾಡಲು ಒಪ್ಪಿ ರೂ.5,14,000/-ಗಳನ್ನು ಇಸಾರ ಹಣವೆಂದು ಪಡೆದು ದಿನಾಂಕ 30.06.2015 ರಂದು ಸಾಕ್ಷೀದಾರರ ಸಮಕ್ಷಮ ನೊಂದಾಯಿತ ಕ್ರಯ ಕರಾರು ಪತ್ರವನ್ನು ಬರೆದುಕೊಟ್ಟಿದ್ದು, ಉಳಿದ ಮೊತ್ತ ರೂ.86,000/- ವನ್ನು ಕ್ರಯ ಪತ್ರವನ್ನು ಬರೆದುಕೊಡುವ ಸಮಯದಲ್ಲಿ ನೀಡಲು ವಾದಿಯು ಒಪ್ಪಿಕೊಂಡಿದ್ದರು. ವಾದಿಯು ಸದರಿ ರೂ.86 ಸಾವಿರಗಳನ್ನು ತೆಗೆದುಕೊಂಡು ಕ್ರಯ ಪತ್ರವನ್ನು ಬರೆದುಕೊಡುವಂತೆ ಪ್ರತಿವಾದಿಯನ್ನು ಕೇಳಿಕೊಂಡಿದ್ದು, ಪ್ರತಿವಾದಿಯು ಮುಂದೂಡುತ್ತಾ ಬಂದಿರುತ್ತಾರೆ. ಪ್ರತಿವಾದಿಯು ವಾದಿ ಕೊಟ್ಟ ಹಣವನ್ನು ಬಳಿಸಿಕೊಂಡು ದಾವಾ ಆಸ್ತಿಯನ್ನು ಉಪಯೋಗ ಮಾಡುತ್ತಾ ಬಂದಿರುತ್ತಾರೆ. ವಾದಿಯು ತನ್ನ ದುಡಿಮೆ ದುಡ್ಡನ್ನು ಪ್ರತಿವಾದಿಗೆ ಕೊಟ್ಟು ಖರೀದಿ ಕರಾರು ಮಾಡಿಕೊಂಡಿರುತ್ತೇನೆ ಎಂದು ಹೇಳುತ್ತಾ ದಾವೆಯ ಅಂತಿಮ ವಿಲೇಯವರೆಗೆ ದಾವಾ ಆಸ್ತಿಯನ್ನು ಪರಭಾರೆ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬೇಕೆಂದು ಪ್ರಾರ್ಥಿಸಿರುತ್ತಾರೆ.

3. ಪ್ರತಿವಾದಿಯು ಜ್ಞಾಪನವನ್ನು ಸಲ್ಲಿಸಿ, ಪ್ರತಿವಾದ ಪತ್ರದ ದೃಢೋಕ್ತಿಗಳನ್ನು ಅನುಸರಿಸಿಕೊಂಡು ಜ್ಞಾಪನವನ್ನು ಸಲ್ಲಿಸಿರುತ್ತಾರೆ. ಸದರಿ ಪ್ರತಿವಾದ ಪತ್ರದಲ್ಲಿ ಪ್ರತಿವಾದಿಯು ತನಗೆ ಮನೆತನದ ಅಡಚಣೆ ಸಲುವಾಗಿ ಹಣದ ಅವಶ್ಯಕತೆ ಇದ್ದು ದಾವಾ ಆಸ್ತಿಯನ್ನು ಮಾರಟಕ್ಕೆ ತೆಗೆದು, ದಾವಾ ಆಸ್ತಿಗೆ ಸಂಬಂಧಿಸಿ, ತನ್ನ ಮತ್ತು

ವಾದಿಯ ನಡುವೆ ಕ್ರಯ ಕರಾರು ಆಗಿದೆ ಎಂದು ವಾದಿ ಹೇಳುತ್ತಿರುವುದನ್ನು ಸ್ಪಷ್ಟವಾಗಿ ನಿರಾಕರಿಸಿರುತ್ತಾರೆ. ಮುಂದುವರೆದು ಕುಟುಂಬದ ಅವಶ್ಯಕತೆಗಾಗಿ ಹಣ ಬೇಕಾಗಿದ್ದು, ವಾದಿಯನ್ನು ಸಂಪರ್ಕಿಸಿ ರೂ.6 ಲಕ್ಷವನ್ನು ಕೈಗಡ ಎಂದು ಕೊಡುವಂತೆ ಕೇಳಿಕೊಂಡಿದ್ದು ವಾದಿಯು ರೂ.6 ಲಕ್ಷವನ್ನು ಸಾಲವಾಗಿ ಕೊಡಲು ಒಪ್ಪಿ, ನೊಂದಾಯಿತ ಕ್ರಯ ಕರಾರು ಪತ್ರವನ್ನು ಬರೆದುಕೊಡುವಂತೆ ಕೇಳಿಕೊಂಡಿದ್ದರಿಂದ ದಾವಾ ಆಸ್ತಿಯನ್ನು ಭದ್ರತೆಗಾಗಿ ಕ್ರಯ ಕರಾರು ಪತ್ರವನ್ನು ಬರೆದುಕೊಟ್ಟಿದ್ದು, 2016 ರಿಂದ ಪ್ರತಿವಾದಿಯು ಹಂತ ಹಂತವಾಗಿ ವಾದಿಗೆ ಕೈಗಡ ಹಣವನ್ನು ಮರಳಿ ಕೊಟ್ಟಿದ್ದು ಇರುತ್ತದೆ ಮತ್ತು ವಾದಿಗೆ ಅನೇಕ ಸಲ ಕಬಜಾ ರಹಿತ ಕರಾರು ಪತ್ರ ರದ್ದು ಮಾಡಲು ವಿನಂತಿಸಿಕೊಂಡರು ವಾದಿಯು ಒಂದಲ್ಲ ಒಂದು ನೆಪ ಹೇಳುತ್ತಾ ಬಂದಿರುತ್ತಾರೆ. ವಾದಿಯು ತೊಂದರೆ ಕೊಡಲು ಸಲುವಾಗಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ಹೇಳುತ್ತಾ ಈ ಅರ್ಜಿಯನ್ನು ವಜಾಗೊಳಿಸುವಂತೆ ಪ್ರಾರ್ಥಿಸಿರುತ್ತಾರೆ.

4. ನನ್ನ ಪರಿಗಣನೆಗೆ ಈ ಕೆಳಗಿನ ಅಂಶಗಳು ಉದ್ಭವಿಸುತ್ತವೆ.

   1. ವಾದಿಯು ಮೇಲ್ನೋಟಕ್ಕೆ ಉತ್ತಮವಾದ ಪ್ರಕರಣವನ್ನು ಹೊಂದಿದ್ದಾರೆಂದು ತೋರಿಸಿಕೊಡುವರೇ ?
   2. ವಾದಿಯು ಅನುಕೂಲತೆಯ ಒಲವು ತನ್ನ ಪರವಾಗಿ ಇದೆ ಎಂದು ತೋರಿಸಿಕೊಡುವರೇ ?
   3. ಈ ಅರ್ಜಿಯನ್ನು ಪುರಸ್ಕರಿಸದಿದ್ದರೆ ತನಗೆ ತುಂಬಲಾರದ ನಷ್ಟ ಉಂಟಾಗುತ್ತದೆಂದು ವಾದಿಯು ತೋರಿಸಿಕೊಡುವರೇ ?
   4. ಯಾವ ಆದೇಶ ?

5. ಉಭಯ ಪಕ್ಷಗಾರರ ವಾದವನ್ನು ಆಲಿಸಿದ್ದೇನೆ ಮತ್ತು ದಾಖಲೆಗಳನ್ನು ಪರಿಶೀಲಿಸಿದ್ದೇನೆ .

6. ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆ.

ಅಂಶ.ನಂ:.1 : ಸಕಾರಾತ್ಮಕವಾಗಿ

ಅಂಶ.ನಂ:.2 : ಸಕಾರಾತ್ಮಕವಾಗಿ

ಅಂಶ.ನಂ:.3 : ಸಕಾರಾತ್ಮಕವಾಗಿ

ಅಂಶ.ನಂ. 4 : ಅಂತಿಮ ಆದೇಶದಂತೆ, ಈ ಕೆಳಗಿನ ಕಾರಣಗಳಿಗಾಗಿ.

## ಕಾರಣಗಳು ಃ

7. **ಅಂಶ ಃ 1 ರಿಂದ 3 ಃ** ಈ ಮೂರು ಅಂಶಗಳು ಒಂದಕ್ಕೊಂದು ಪೂರಕವಾಗಿದ್ದು ಚರ್ಚೆಯ ಪುನಾರ್ವತನೆ ತಪ್ಪಿಸುವ ಸಲುವಾಗಿ ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ. ವಾದಿಯು ಈ ದಾವೆಯನ್ನು ಸಲ್ಲಿಸಿ, ದಾವಾ ಆಸ್ತಿಗೆ ಸಂಬಂಧಿಸಿ, ಪ್ರತಿವಾದಿಯು ಬರೆದುಕೊಟ್ಟಿದ್ದಾರೆ ಎಂದು ಹೇಳಲಾಗುವ ವಿವಾದಿತ ಕ್ರಯ ಕರಾರಿನ ಪ್ರಕಾರ ಕ್ರಯ ಪತ್ರವನ್ನು ಬರೆದುಕೊಡುವಂತೆ ಪ್ರತಿವಾದಿಯ ವಿರುದ್ಧ ಡಿಕ್ರಿಯನ್ನು ಮಾಡುವಂತೆ ಪ್ರಾರ್ಥಿಸಿರುತ್ತಾರೆ. ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ದಾವೆಯ ಅಂತಿಮ ವಿಲೇಯವರೆಗೆ ದಾವಾ ಆಸ್ತಿಯನ್ನು ಪರಭಾರೆ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬೇಕೆಂದು ಪ್ರಾರ್ಥಿಸಿರುತ್ತಾರೆ. ದಾವಾ ಆಸ್ತಿಯನ್ನು ಪ್ರತಿವಾದಿಯು ರೂ.6,00,000/-ಗಳಿಗೆ ಮಾರಾಟ ಮಾಡಲು ಒಪ್ಪಿ

ರೂ.5,14,000/-ಗಳನ್ನು ಇಸಾರ ಹಣವೆಂದು ಪಡೆದು ನೊಂದಾಯಿತ ಕ್ರಯ ಕರಾರು ಪತ್ರವನ್ನು ಬರೆದುಕೊಟ್ಟಿದ್ದರೆಂದು ವಾದಿಯು ಹೇಳಿರುತ್ತಾರೆ.

8. ಆದರೆ ಇದಕ್ಕೆ ವಿರುದ್ದವಾಗಿ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ತನಗೆ ಹಣದ ಅವಶ್ಯಕತೆ ಉಂಟಾಗಿ ರೂ.6 ಲಕ್ಷವನ್ನು ವಾದಿಯಿಂದ ಕೈಗಡವೆಂದು ಪಡೆದು, ಭದ್ರತೆಯ ಸಲುವಾಗಿ ಕ್ರಯ ಕರಾರು ಪತ್ರವನ್ನು ವಾದಿಯ ಕೋರಿಕೆಯ ಮೇರೆಗೆ ಬರೆದುಕೊಟ್ಟಿರುವುದಾಗಿ ಹೇಳಿರುತ್ತಾರೆ. ಸದರಿ ವಿವಾದಿತ ಕ್ರಯ ಕರಾರು ಪತ್ರವನ್ನು ವಾದಿಯು ಹಾಜರುಪಡಿಸಿರುತ್ತಾರೆ. ಸದರಿ ಕ್ರಯ ಕರಾರು ಪತ್ರವು ನೊಂದಾಯಿತ ದಸ್ತಾವೇಜು ಆಗಿರುತ್ತದೆ. ಸದರಿ ದಸ್ತಾವೇಜನ್ನು ಬರೆದುಕೊಟ್ಟಿರುವುದಾಗಿ ಪ್ರತಿವಾದಿಯ ಒಪ್ಪಿರುತ್ತಾರೆ. ಆದರೆ ತಾನು ವಾದಿಯಿಂದ ಪಡೆದ ಕೈಗಡದ ಸಲುವಾಗಿ ಭದ್ರತೆಗಾಗಿ ಬರೆದುಕೊಟ್ಟಿರುವುದಾಗಿ ಪ್ರತಿವಾದಿಯು ಹೇಳಿರುತ್ತಾರೆ.

9. ವಿವಾದಿತ ಕ್ರಯ ಕರಾರು ಪತ್ರವನ್ನು ಯಾವ ಸಂದರ್ಭದಲ್ಲಿ ಬರೆದುಕೊಡಲಾಗಿತ್ತು ಎನ್ನುವ ವಿಚಾರವು ಸಂಪೂರ್ಣ ವಿಚಾರಣೆಯ ನಂತರ ನಿರ್ಧಾರವಾಗಬೇಕಾದ ವಿಷಯವಾಗಿರುತ್ತದೆ. ಈ ಹಂತದಲ್ಲಿ ಸದರಿ ವಿವಾದಿತ ಕ್ರಯ ಕರಾರು ಪತ್ರದಲ್ಲಿ ಹೇಳಿರುವ ವಿಚಾರವು ಸುಳ್ಳು ಎಂದು ಹೇಳಲು ಸಾಧ್ಯವಿಲ್ಲ. ಸದರಿ ಕ್ರಯ ಕರಾರು ಪತ್ರವು ನೊಂದಾಯಿತ ದಸ್ತಾವೇಜು ಆಗಿರುವ ಕಾರಣ ಈ ಹಂತದಲ್ಲಿ ಪ್ರತಿವಾದಿ ಹೇಳುತ್ತಿರುವುದನ್ನು ನಂಬಲು ಸಾಧ್ಯವಿಲ್ಲ. ವಿವಾದಿತ ದಾವಾ ಆಸ್ತಿಯನ್ನು ಪ್ರತಿವಾದಿಯು

ಮಾರಾಟ ಮಾಡಿದರೆ ವಾದಿಗೆ ತೊಂದರೆಯಾಗಿ, ಈ ದಾವೆಯನ್ನು ಸಲ್ಲಿಸಿರುವ ಉದ್ದೇಶವು ವಿಫಲಗೊಳ್ಳಲಿದೆ. ಈ ಕಾರಣದಿಂದ ವಾದಿಯ ಪರವಾಗಿ ಈ ಹಂತದಲ್ಲಿ ಮೇಲ್ನೋಟಕ್ಕೆ ಉತ್ತಮವಾದ ಪ್ರಕರಣ ಇದ್ದು, ಅನುಕೂಲತೆಯ ಒಲವು ವಾದಿಯ ಪರವಾಗಿ ಇರುತ್ತದೆ. ವಾದಿಯು ಪ್ರಾರ್ಥಿಸಿದಂತೆ ಪ್ರತಿವಾದಿಯ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡದಿದ್ದರೆ ವಾದಿಗೆ ತುಂಬಲಾರದ ನಷ್ಟ ಮತ್ತು ತೊಂದರೆ ಆಗಲಿದೆ. ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡುವುದರಿಂದ ಪ್ರತಿವಾದಿಗೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ. **ಅಂತೆಯೇ ಅಂಶ ನಂ.1 ರಿಂದ 3 ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

10. <u>ಅಂಶ.ನಂ.4ಃ</u> ಅಂಶ ನಂ,1 ರಿಂದ 3 ಕ್ಕೆ ನೀಡಿರುವ ಉತ್ತರ ಮತ್ತು ಕಾರಣಗಳಿಗಾಗಿ ಈ ಕೆಳಗಿನಂತೆ ಆದೇಶಿಸಲಾಗಿದೆ.

## <u>ಆದೇಶ</u>

ವಾದಿ/ ಅರ್ಜಿದಾರರು ಸಿ.ಪಿ.ಸಿ. ಕ್ರಮಾದೇಶ 39 ನಿಯಮ 1 ಮತ್ತು 2 ರನ್ವಯ ಸಲ್ಲಿಸಿರುವ ಮಧ್ಯಂತರ ಅರ್ಜಿ ನಂ.1 ನ್ನು ಪುರಸ್ಕರಿಸಲಾಗಿದೆ.

ಸಿಂದಗಿ ತಾಲೂಕು ಹಿಕ್ಕನಗುತ್ತಿ ಗ್ರಾಮದ ದಾವಾ ಜಮೀನು ರಿ.ನಂ. 9/1 ಎ ಪೋಡಿಯ ನಂತರ ರಿ.ಸ ನಂ.9/*/* ಪೈಕಿ 01

ಎಕರೆ 30 ಗುಂಟೆ ಮತ್ತು ರಿ.ಸ.ನಂ. 10/1 ಎ ಪೋಡಿಯ ನಂತರ ರಿ.ಸ ನಂ.10/*/* ಪೈಕಿ 01 ಎಕರೆ 32 ಗುಂಟೆ ಜಮೀನನ್ನು ಈ ದಾವೆಯ ಅಂತಿಮ ವಿಲೆಯವರಿಗೆ ಮಾರಾಟ ಮಾಡದಂತೆ, ಪರಭಾರೆ ಮಾಡದಂತೆ ಪ್ರತಿವಾದಿಯ ವಿರುದ್ದ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಲಾಗಿದೆ.

(ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರನಲ್ಲಿ ಉಕ್ತಲೇಖನವನ್ನು ನೀಡಲಾಯಿತು, ನಂತರ ಪರಿಶೀಲಿಸಿ, ಸಹಿ ಮಾಡಿ ಈ ದಿನಾಂಕ 6ನೇ ನವೆಂಬರ 2023 ರಂದು ತೆರೆದ ನ್ಯಾಯಾಲಯದಲ್ಲಿ ಆದೇಶವನ್ನು ಉಚ್ಚರಿಸಲಾಯಿತು)

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ವ
ಜೆ.ಎಮ್.ಎಫ್.ಸಿ., ಸಿಂದಗಿ.